ಬೈಂದೂರು ಬಳಿ ಬಾಕ್ಸೈಟ್ ನಿಕ್ಷೇಪ

೧೩೩೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಬಳಿಯ ಬಾಕ್ಸೈಟ್ ನಿಕ್ಷೇಪದಿಂದ ಅದುರು ತೆಗೆಯುವುದನ್ನು ನಿಲ್ಲಿಸಲು ಕಾರಣವೇನು ?

ಆ) ಆ ಅದುರನ್ನು ಬಳಸಿ ಸ್ಥಳೀಯವಾಗಿ ಉದ್ದಿಮೆ ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ ?

ಶ್ರೀ ರಮೇಶ್ ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

ಅ) ಬಾಕ್ಸೈಟ್ ಅದಿರಿಗೆ ಸಧ್ಯದಲ್ಲಿ ಬೇಡಿಕೆ ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಅದುರು ತೆಗೆಯುವುದನ್ನು ನಿಲ್ಲಿಸಲಾಗಿದೆ.

ಆ) ಸರ್ಕಾರದ ವತಿಯಿಂದ ಬಾಕ್ಸೈಟ್ ಅದಿರನ್ನು ಬಳಸಿ ಯಾವ ಉದ್ದಿಮೆಯನ್ನೂ ಸ್ಥಾಪಿಸುವ ಯೋಜನೆ ಸಧ್ಯಕ್ಕೆ ಇಲ್ಲ.

ಶ್ರೀ ಜಿ. ಎಸ್. ಆಚಾರ್.— ಬೈಂದೂರು ಬಳಿ ವಿಫುಲವಾಗಿ ಬಾಕ್ಸೈಟ್ ಇರುವುದರಿಂದ ಇದನ್ನು ಉಪಯೋಗಿಸಿಕೊಂಡು ಯಾವುದಾದರೂ ಉದ್ಯಮವನ್ನು ತೆಗೆಯುವ ಯೋಚನೆ ಏನಾದರೂ ಸರ್ಕಾರಕ್ಕೆ ಇದೆಯೇ ? ಏಕೆಂದರೆ ಅದಿರು ತೆಗೆಯುತ್ತಿದ್ದಾಗ ನೂರಾರು ಜನರಿಗೆ ಅಲ್ಲಿ ಉದ್ಯೋಗದ ಅವಕಾಶ ಲಭಿಸಿತ್ತು. ಆದ್ದರಿಂದ ಇಂಥ ಉದ್ಯಮವನ್ನು ತೆಗೆಯಲಿಕ್ಕೆ ಸರ್ಕಾರ ಏನಾದರೂ ಅಲ್ಲಿ ಪರಿಶೀಲನೆ ನಡೆಸಿದೆಯೇ ? ಎರಡನೆಯದಾಗಿ ಕರ್ನಾಟಕದಲ್ಲಿ ಹೊರಗಡೆ ಇರತಕ್ಕಂಥ ಉದ್ಯಮಗಳಿಗೆ ಈ ಅದಿರನ್ನು ಕಳುಹಿಸಲಿಕ್ಕೆ ಕೇವಲ ವಿದೇಶಗಳಿಗೆ ಮಾತ್ರ ಅಲ್ಲ, ಇಲ್ಲಿನ ಉದ್ಯಮಗಳಿಗೆ ಅದಿರನ್ನು ಕಳುಹಿಸಲಿಕ್ಕೆ ಏನಾದರೂ ಯೋಚನೆ ನಡೆದಿದೆಯೇ ?

ಶ್ರೀ ರಮೇಶ್ ಜಿ. ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಸರ್ಕಾರದ ಮುಂದೆ ಸದ್ಯಕ್ಕೆ ಯಾವ ಕಾರ್ಖಾನೆಯನ್ನು ತೆಗೆಯುವ ಉದ್ದೇಶ ಇಲ್ಲ ಎಂದು ಹೇಳಿದ್ದೇನೆ. ಎರಡನೆಯದು ಈ ಬಾಕ್ಸೈಟ್‌ನ್ನು ಫೈನಲ್ ಪ್ರಾಡಕ್ಟ್ ಮಾಡುವುದಕ್ಕೆ ಜಾಸ್ತಿ ವಿದ್ಯುತ್ ಬೇಕಾಗುತ್ತದೆ. ಉದಾಹರಣೆಗೆ ಪಂದ್ರಾಸ್ ಕಂಪನಿಯವರು ಮೆಟ್ಟೂರ್‌ನಲ್ಲಿ ಮೂರು ಸಾವಿರ ಟನ್‌ನ್ನು ಖರೀದಿ ಮಾಡುತ್ತಿದ್ದರು. ವಿದ್ಯುತ್ ಶಕ್ತಿಯ ಅಭಾವದಿಂದ ಇಂಥ ಕಾರ್ಖಾನೆಗಳು ನಿಂತು ಹೋಗಿವೆ. ಈಗ ಸಧ್ಯಕ್ಕೆ ಅಂಥ ಕಾರ್ಖಾನೆಗಳನ್ನು ಶುರು ಮಾಡುವ ಯೋಚನೆ ಇಲ್ಲ. ಈ ವಿದ್ಯುತ್‌ನ ಒಂದು ಸುಧಾರಣೆಯಾದರೆ ಮುಂದೆ ಅಂಥ ಉದ್ಯಮವನ್ನು ಸ್ಟಾರ್ಟ್ ಮಾಡಬಹುದು ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಹೆಚ್.ಡಿ.ಪಿ. ಪ್ಲಾಸ್ಟಿಕ್ ಪೈಪ್‌ಗಳ ಅಳವಡಿಕೆಯಿಂದಾಗುವ ತೊಂದರೆಯ ಬಗ್ಗೆ

೧೪೪೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಬ್ ಮರ್ಸಿಬಲ್ ಪಂಪು ಹಾಕುವಾಗ ಹೆಚ್.ಡಿ.ಪಿ. ಪ್ಲಾಸ್ಟಿಕ್ ಪೈಪ್ ಕಡ್ಡಾಯವಾಗಿ ಅಳವಡಿಸಲು ಸರ್ಕಾರ ತೀರ್ಮಾನಿಸಿದೆಯೇ ?

ಆ) ಈ ರೀತಿ ಕಡ್ಡಾಯವಾಗಿ ಪೈಪನ್ನು ಹಾಕುವುದರಿಂದ ರೈತರಿಗೆ ಆಗುವ ತೊಂದರೆ ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಈ ಹಿಂದೆ ಸಬ್ ಮರ್ಸಿಬಲ್ ಪಂಪುಗಳಿಗೂ ಇತರೆ ಪಂಪುಗಳಂತೆ ಹೆಚ್.ಪಿ.ಡಿ.ಇ, ಆರ್.ಪಿ.ವಿ.ಸಿ. ಪೈಪುಗಳನ್ನು ಅಳವಡಿಸುವುದು ಮುಂಡಳಿ ಕಡ್ಡಾಯ ಮಾಡಿತ್ತು.

ಆ) ಬಂದಿದೆ.

ಇ) ಬಂದ ಮನವಿಗಳನ್ನು ಪುರಸ್ಕರಿಸಿ ಮುಂಡಳಿ ಸಬ್ ಮರ್ಸಿಬಲ್ ಪಂಪುಗಳಿಗೆ ಕಡ್ಡಾಯಗೊಳಿಸಿ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ. ಪೈಪುಗಳ ನಿಬಂಧನೆಯನ್ನು ಸಡಿಲಗೊಳಿಸಿ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ, ಅಥವಾ ಜಿ.ಐ. ಪಂಪುಗಳಲ್ಲಿ ಯಾವುದಾದರೊಂದನ್ನು ಅಳವಡಿಸುವುದನ್ನು ಗ್ರಾಹಕರ ಇಚ್ಛೆಗೆ ಬಿಡಲು ತೀರ್ಮಾನಿಸಿದ್ದು ಈ ಬಗ್ಗೆ ಮುಂಡಳಿ ೧೧–೨–೧೯೮೮ರಂದು ಸೂಕ್ತ ಆದೇಶ ನೀಡಿದ್ದು ಸಬ್ ಮರ್ಸಿಬಲ್ ಪಂಪುಗಳ ಗ್ರಾಹಕರು ಈಗ ಈ ಮೂರರಲ್ಲಿ ತಮಗೆ ಇಚ್ಛೆ ಬಂದ ಪೈಪುಗಳನ್ನು ಅಳವಡಿಸಬಹುದು.

ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಎರಡು ಬಾರಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಮತ್ತೆ ಮತ್ತೆ ಇದೇ ಪ್ರಶ್ನೆಯನ್ನು ಏತಕ್ಕೆ ಕೇಳಿದ್ದಾರೋ ಗೊತ್ತಿಲ್ಲ.

೧೧–೩೦ ಎ. ಎಂ.

ಶ್ರೀ ಬಿ. ಆರ್. ನೀಲಕಂಠಪ್ಪ — ಅಧ್ಯಕ್ಷರೆ ಹೆಚ್.ಡಿ.ಪಿ.ಇ. ಆರ್.ಪಿ.ವಿ.ಸಿ. ಮತ್ತು ಜಿ.ಐ. ಪೈಪುಗಳನ್ನು ಮಾತ್ರ ಅಳವಡಿಸಬೇಕೆಂದು ಹೇಳಿದ್ದಾರೆ. ಇದನ್ನು ಬಿಟ್ಟು ಇನ್ನೂ ಕೆಲವು ಉದ್ಯಮಿಯವರು ಹೊಸದಾಗಿ ಒಳ್ಳೆಯ ಪೈಪ್‌ಗಳನ್ನು ಮಾಡಿದರೆ ಅದನ್ನು ಕೂಡ ಉಪಯೋಗಿಸಲು ಏತಕ್ಕೆ ಅವಕಾಶವನ್ನು ಮಾಡಿಕೊಡಬಾರದು ? ಕೇವಲ ಮೂರು ವಿಷಯಗಳಲ್ಲಿ ಮಾತ್ರ ಕೊಂಡು ಕೊಳ್ಳಬೇಕೆಂದು ಏತಕ್ಕೆ ಇಟ್ಟುಕೊಂಡಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ — ಇವುಗಳಲ್ಲದೇ ಇನ್ನೂ ಯಾವ ತರಹದ ಪೈಪ್‌ಗಳು ಇವೆಯೋ ಅದು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್‌ನ ಯಾವ ಪೈಪ್‌ನ್ನಾದರೂ ಈಗ ಉಪಯೋಗ ಮಾಡಬಹುದು. ಜನರು ತಮಗೆ ಅನುಕೂಲವಾದಂಥ ಯಾವ ಪೈಪ್‌ನ್ನಾದರೂ ಉಪಯೋಗಿಸಿಕೊಳ್ಳಬಹುದು. ಜಿ.ಐ. ಪೈಪ್‌ನ ಉಪಯೋಗಿಸುವುದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಹೇಳಿದುದು ಏಕೆ ಅಂದರೆ, ಆ ಪೈಪ್‌ಗಳಲ್ಲಿ ಐದಾರು ವರ್ಷಗಳಾದ ಮೇಲೆ ಒಳಗಡೆ ತುಕ್ಕು ಹಿಡಿದು ಪ್ರಿಕ್ಷನ್‌ಲಾಸ್ ಜಾಸ್ತಿಯಾಗಿ ಹೆಚ್ಚಿನ ಹೈಪವರ್ ಬೇಕಾಗುತ್ತದೆ. ನೀರು ಕಡಿಮೆಯಾಗಿ ಆದರಿಂದ ವಿದ್ಯುಚ್ಛಕ್ತಿಯು ನಷ್ಟವೂ ಉಂಟಾಗುತ್ತವೆ. ಆ ದೃಷ್ಟಿಯಿಂದ ಪಿ.ವಿ.ಸಿ. ಮತ್ತು ಹೆಚ್‌ಡಿಪಿಇ ಪೈಪ್‌ನ್ನು ಉಪಯೋಗಿಸ ತಕ್ಕಂಥಾದ್ದನ್ನು ಆರ್‌ಎಸಿಯವರ ಒತ್ತಾಯದ ಮೇರೆಗೆ ಮಾಡಿದ್ದೇವೆ. ನಮ್ಮ ರೈತರು ಅದಕ್ಕೆ ಬಹಳ ವಿರೋಧ ಮಾಡಿದುದರಿಂದ, ವಿರೋಧ ವ್ಯಕ್ತಪಡಿಸಿದ್ದ ಕಾರಣ ಜಿ.ಐ. ಮತ್ತು ಮೊದಲು ಹೇಳಿದ ಮೂರರಲ್ಲಿ ಯಾವುದಾದರೂ ಒಂದನ್ನು ಉಪಯೋಗಿಸಿ ಎಂದು ಹೇಳಿ ನಾವು ಕಂಪನಿಯವರಿಗೆ ಅವರ ತಯಾರಿಕೆಯನ್ನು ಪಾಪ್ಯುಲರೈಸ್ ಮಾಡಿಕೊಳ್ಳಲಿಕ್ಕೆ ಹೇಳಿದ್ದೇವೆ. ಎಲ್ಲಾ ಕಡೆಗಳಿಗೂ ಹೋಗಿ ಅಲ್ಲಿರುವ ರೈತರನ್ನು ಕರೆಯಿಸಿ, ಅವರಿಗೆ ಇದರ ಉಪಯುಕ್ತತೆಯನ್ನು ತಿಳಿಸಿ ಹೇಳುವಂತೆ ಡೆಮಾನ್ಸ್‌ಟ್ರೇಶನ್ ಮಾಡಿ ಎಂದು ಕೂಡ ಹೇಳಿದ್ದೇವೆ. ನಿಮ್ಮ ಡೆಮಾನ್ಸ್ಟ್ರೇಷನ್‌ನಿಂದ ರೈತರಿಗೆ ಇದರ ಅನುಕೂಲತೆಯ ಬಗ್ಗೆ ಅರಿವು ಆಗಬೇಕು ಎಂದು ಹೇಳಿದ್ದೇವೆ. ಆದುದರಿಂದ ಮುಂಡಳಿಯ ೧೧–೨–೧೯೮೮ರ ಆದೇಶದ ಪ್ರಕಾರ ಮೂರರಲ್ಲಿ ಯಾವ ಪೈಪ್‌ನ್ನು ಬೇಕಾದರೂ ಗ್ರಾಹಕರು ಅಳವಡಿಸಬಹುದು.

ಗ್ರಾಮಾಂತರ ವಿದ್ಯುದ್ದೀಕರಣದ ಕುರಿತು.

೧೫೬೮. ಶ್ರೀ ಜಿ. ರಾಮದಾಸ್ (ಹೊಸದುರ್ಗ) — ಮಾನ್ಯ ರಾಜ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮಾಂತರ ವಿದ್ಯುದ್ದೀಕರಣಕ್ಕಾಗಿ ಸರ್ಕಾರದವರು ಯಾವುದಾದರೂ ಯೋಜನೆಯನ್ನು ರೂಪಿಸಿದ್ದಾರೆಯೇ,

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನ ಜಾನಕಲ್ ಮೂಡ್ಲಾಜೋವಿ ಹಟ್ಟಿಯಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟು ಒಂದೂವರೆ ವರ್ಷವಾದರೂ ಇನ್ನೂ ವಿದ್ಯುತ್ ಸಂಪರ್ಕವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?